# ವಚನ ಚಳುವಳಿ ಮತ್ತು ಸಮಾಜ ಪರಿವರ್ತನೆ

**ವಸುಂಧರಿ ಎಸ್.**

ಕನ್ನಡ ಉಪನ್ಯಾಸಕರು, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ.

DOI: https://doi.org/10.5281/zenodo.15504705

## ABSTRACT:

ಆತ್ಮಾನುಭಾವದ ಚೈತನ್ಯ ಮತ್ತು ಸಮಾಜಕಲ್ಯಾಣದ ತೀವ್ರಕಾಳಜಿಯೊಂದಿಗೆ ಮೂಢನಂಬಿಕೆ, ಕಂದಾಚಾರಗಳಿಂದ ಜಡವಾಗಿದ್ದ ಸಮಾಜವನ್ನು ಪರಿವರ್ತಿಸುವ ಸಂಕಲ್ಪದಿಂದ ಅವರು ಒಂದು ವಿನೂತನ ಚಳುವಳಿಯನ್ನೇ ಪ್ರಾರಂಭಿಸಿದರು. ಮೇಲು–ಕೀಳು ಎಂಬ ವರ್ಣ ಅಸಮಾನತೆ;ಬಡವ ಬಲ್ಲಿದ ಎಂಬ ವರ್ಗ ತಾರತಮ್ಯ;ಹೆಣ್ಣು–ಗಂಡು ಎಂಬ ಲಿಂಗಭೇದ ಇವೆಲ್ಲ ತರತಮ ವ್ಯವಸ್ಥೆಯನ್ನು ಹೋಗಲಾಡಿಸಿ ಸಮಾನತೆಯ ಆಧಾರದ ಮೇಲೆ ಹೊಸ ಸಮಾಜವನ್ನು ಅವರು ಕಟ್ಟಬಯಸಿದರು. ಇದಕ್ಕಾಗಿ ಕಲ್ಯಾಣದಲ್ಲಿ ಅನುಭವ ಮಂಟಪ ಸ್ಥಾಪನೆಯಾಯಿತು. ಬಸವಣ್ಣ ಸಂಚಾಲಕನಾಗಿ ಮುಂದೆ ನಿಂತ. ಮಹಾನುಭಾವಿ ಅಲ್ಲಮಪ್ರಭುವಿನ ಮಾರ್ಗದರ್ಶನ ದೊರೆಯಿತು. ಚೆನ್ನಬಸವ, ಅಕ್ಕನಾಗಮ್ಮ, ಹಡಪದ ಅಪ್ಪಣ್ಣ, ಮಡಿವಾಳ ಮಾಚಯ್ಯ ಮೊದಲಾದ ನೂರಾರು ವಚನಕಾರರು ಕಾರ್ಯಕರ್ತರಾಗಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡರು. ಬಸವಾದಿ ಶರಣರು ಕಲ್ಯಾಣದಲ್ಲಿ ಹೊತ್ತಿಸಿದ ಈ ಬೆಳಕಿನ ಕಿರಣಗಳು ಕನ್ನಡ ನಾಡಿನಾದ್ಯಂತ ಮತ್ತು ಅದರಾಚೆಗೂ ವ್ಯಾಪಕವಾಗಿ ಹರಡಿದವು. ಉಡುತಡಿಯಿಂದ ಅಕ್ಕಮಹಾದೇವಿ, ಬಳ್ಳಿಗಾವೆಯಿಂದ ಪ್ರಭುದೇವ, ಸೊನ್ನಲಿಗೆಯಿಂದ ಸಿದ್ಧರಾಮ ಶಿವಯೋಗಿ, ನೆರೆಯ ಪ್ರಾಂತ್ಯದಿಂದ ತೆಲುಗು ಜೊಮ್ಮಯ್ಯ ದೂರದ ಕಾಶ್ಮೀರದಿಂದ ಮಹಾದೇವ–ಮಹಾದೇವಮ್ಮ– ಹೀಗೆ ನೂರಾರು ಚೈತನ್ಯಗಳು ಬಂದು ಕಲ್ಯಾಣದಲ್ಲಿ ಸಂಗಮಿಸಿದವು. ಈ ಇಡೀ ಸಮುದಾಯ ಸಾಮೂಹಿಕವಾಗಿ; ಅಸಮಾನತೆ, ದುಃಖ–ದಾರಿದ್ರ್ಯ, ಹಿಂಸೆ – ಕ್ರೌರ್ಯ ಮೌಢ್ಯತೆಗಳಿಂದ ತತ್ತರಿಸಿ ಹೋಗಿದ್ದ ಸಮಾಜವನ್ನು ಪರಿವರ್ತಿಸಿ, ಅಲ್ಲಿ ಸಮಾನತೆ, ಸುಖ, ಸಂತೋಷ, ಶಾಂತಿ, ಆತ್ಮ ಜ್ಞಾನದ ಬೀಜ ಬಿತ್ತಿ ಹೊಸ ವಾತಾವರಣ ನಿರ್ಮಿಸುವ ಶುಭಸಂಕಲ್ಪ ಮಾಡಿದರು. ಇದು ಕೇವಲ ಕರ್ನಾಟಕದ ವ್ಯಾಪ್ತಿಯಲ್ಲಿ ಮಾತ್ರವಲ್ಲ, ಇಡೀ ಭರತಖಂಡದ ವ್ಯಾಪ್ತಿಯಲ್ಲಿ ಒಂದು ಐತಿಹಾಸಿಕ ಮಹತ್ವದ ಸಂದರ್ಭವೆಂದೇ ಹೇಳಬಹುದು.

## KEYWORDS:

ಮೂಢನಂಬಿಕೆ, ಕಂದಾಚಾರ, ಅಸಮಾನತೆ, ಲಿಂಗಭೇದ, ಆತ್ಮಜ್ಞಾನ.

ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯವು ಒಂದು ಪ್ರಮುಖ ಘಟ್ಟವಾಗಿದೆ. ಕನ್ನಡ ಸಾಹಿತ್ಯವು ಕಾಲದಿಂದ ಕಾಲಕ್ಕೆ ಹೊಸ ಹೊಸ ರೂಪಗಳನ್ನು ಪಡೆಯುತ್ತ ಬಳೆದು ಬಂದಿದೆ. ಚಂಪು, ರಗಳೆ, ಷಟ್ಪದಿ, ಸಾಂಗತ್ಯ, ಕೀರ್ತನೆ- ಇತ್ಯಾದಿ. ಇವುಗಳಂತೆ 'ವಚನ'ವೂ ಒಂದು ಸಾಹಿತ್ಯರೂಪ. ಇದು ನಡುಗನ್ನಡದ ವಿಶೇಷ ಬೆಳೆ. ಹನ್ನೆರಡನೆಯ ಶತಮಾನದ ಬಸವಾದಿ ಶಿವಶರಣರು ಇದರ ಬೇಸಯಗಾರರು. ಕನ್ನಡ ಸಾಹಿತ್ಯದಲ್ಲಿ ಮಾತ್ರವಲ್ಲ ಇಡೀ ಭಾರತೀಯ ಸಾಹಿತ್ಯದಲ್ಲಿಯೇ ಇದೊಂದು ಅಪರೂಪದ ಸಾಹಿತ್ಯರೂಪ. ವಚನ ಸಾಹಿತ್ಯಕ್ಕೂ ಮತ್ತು ಅದರ ಪೂರ್ವಕಾಲೀನ ಸಾಹಿತ್ಯಕ್ಕೂ ಅಭಿವ್ಯಕ್ತಿ ಸ್ವರೂಪ ಮತ್ತು ಧೋರಣೆ- ಎರಡೂ ಆಯಾಮಗಳಲ್ಲಿ ಅಜಗಜಾಂತರ ವ್ಯತ್ಯಾಸವಿದೆ. ಹಳೆಗನ್ನಡದ ಬಹುಪಾಲು ಕವಿಗಳು ಜೈನರು. ರಾಜಾಶ್ರಯದಲ್ಲಿದ್ದವರು. ಅವರ ಕಾವ್ಯದ ಭಾಷೆ ಸಂಸ್ಕೃತ ಭೂಯಿಷ್ಟವಾದ ಕನ್ನಡ. ಅವರು ಆಯ್ಕೆ ಮಾಡಿಕೊಂಡ ಛಂದೋರೂಪ ಪಂಡಿತಪ್ರಿಯವಾದ ಪ್ರೌಢಚಂಪು. ಹೀಗಾಗಿ ಅರಸನ ಆಸ್ಥಾನದ ಪಂಡಿತರ ವಲಯದಲ್ಲಿ ವಿದ್ಯಾವಂತರ ಸೀಮಿತ ಸಮೂಹದಲ್ಲಿ ಮಾತ್ರ ಇಂಥ ಸಾಹಿತ್ಯದ ಚರ್ಚೆಗೆ ಆಸ್ಪದ ಸಾಧ್ಯವಾಗುತ್ತಿತ್ತು. ಆದರೆ ಬಹು ಸಂಖ್ಯಾತರಾದ ಶ್ರೀಸಾಮಾನ್ಯರಿಗೂ ಈ ಸಾಹಿತ್ಯಕ್ಕೂ ಯಾವುದೇ ಸಂಬಂಧವಿರಲಿಲ್ಲ. ಹನ್ನೊಂದನೆಯ ಶತಮಾನದ ಉತ್ತರಾರ್ಧದ ವೇಳೆಗೆ ಕನ್ನಡ ಸಾಹಿತ್ಯದಲ್ಲಿ ಒಂದು ಅಪೂರ್ವ ಪರಿವರ್ತನೆ ಸಂಭವಿಸಿ; ಸಾಹಿತ್ಯ ಮತ್ತು ಜನಸಾಮಾನ್ಯರ ನಡುವೆ ಉಂಟಾಗಿದ್ದ ದೊಡ್ಡ ಕಂದರ ಕಡಿಮೆಯಾಯಿತು.

ಅಚ್ಚಕನ್ನಡದ ಹೊಸ ಬೇಸಾಯಗಾರರಾಗಿ ವಚನಕಾರರು ಕಾಣಿಸಿಕೊಂಡರು. ದೇವಭಾಷೆಯೆಂಬ ಗುಂಗಿನಲ್ಲಿದ್ದು, ಜನಸಾಮಾನ್ಯರನ್ನು ದೂರವಿರಿಸಿದ್ದ ಸಂಸ್ಕೃತ ಭಾಷೆಯನ್ನು ಬಿಟ್ಟು ಇವರು ಜನಸಾಮನ್ಯರ ಆಡು ಭಾಷೆಯಾದ ಅಚ್ಚಗನ್ನಡದಲ್ಲಿಯೆ ವಚನ ಸಾಹಿತ್ಯದ ರಚನೆಯನ್ನು ಆರಂಭಿಸಿದರು. ಶಿವಶರಣರ ಅಂತರಂಗ ಬಹಿರಂಗದ ಅನುಭವಗಳ ಅಭಿವ್ಯಕ್ತಿಯೇ ವಚನಸಾಹಿತ್ಯವೆಂದು ಪ್ರಸಿದ್ಧವಾಯಿತು. ಆದ್ಯ ವಚನಕಾರರು ಯಾರು ಎಂಬುದರ ಬಗೆಗೆ ಭಿನ್ನಾಭಿಪ್ರಾಯಗಳಿವೆಯಾದರೂ; ಸದ್ಯಕ್ಕೆ ಜೇಡರ ದಾಸಿಮಯ್ಯ ಮೊದಲ ವಚನಕಾರ ಎಂದು ಭಾವಿಸಲಾಗಿದೆ. ವಚನಗಳ ಸ್ವರೂಪ ಅನನ್ಯವಾದುದಾಗಿದೆ. ಅವು ಪದ್ಯವೂ ಅಲ್ಲದ ವಿಶಿಷ್ಟ ರಚನೆಗಳು. ಅವುಗಳು ಪದ್ಯದ ಲಯ ಮತ್ತು ಲಲಿತಸ್ವಭಾವವನ್ನೂ ; ಗದ್ಯದ ಸರಳತನವನ್ನೂ ಹೊಂದಿ ಆಕರ್ಷಕವಾಗಿದೆ. ವಚನ ಎನ್ನುವ ಈ ರೂಪವು (From) ಶರಣರು ಕನ್ನಡಕ್ಕೆ ಕೊಟ್ಟ ಕಾಣಿಕೆ. ಈ ವಚನಗಳು ತಮ್ಮ ರೂಪ ಮತ್ತು ಸ್ವರೂಪ (Content) ದಿಂದಲೂ ಕೂಡ ಕನ್ನಡ ಸಾಹಿತ್ಯ ಭಂಡಾರದ ಅಮೂಲ್ಯ ರತ್ನಗಳಾಗಿ ವಿಶ್ವಸಾಹಿತ್ಯದ ದೃಷ್ಟಿಯಿಂದ ಕನ್ನಡದ ಬೆಲೆಯನ್ನು ಹೆಚ್ಚಿಸಿವೆ. ಅನುಭವ ಪ್ರಾಮಾಣಿಕ ಅಭಿವ್ಯಕ್ತಿ

ವಚನಸಾಹಿತ್ಯದ ಮುಖ್ಯ ಗುಣ. ವಚನಗಳು ಶಿವಶರಣರ ಲೌಕಿಕ ಮತ್ತು ಆಧ್ಯಾತ್ಮಿಕ ಜೀವನದ ಅನುಭವಗಳ ಅಭಿವ್ಯಕ್ತಿಯಾಗಿವೆ. ಶಿವಶರಣರ ನಡೆ-ನುಡಿಯಲ್ಲಿ ಒಂದು ಅವಿನಾಭಾವಿಯಾದ ಸಂಬಂಧವಿದೆ. ಅವರು ಏನನ್ನು ಬದುಕಿದ್ದರೋ ಅದನ್ನೆ ಬರೆದಿದ್ದಾರೆ. ಅಥವಾ ಏನನ್ನು ಬರೆದಿದ್ದಾರೋ ಅದನ್ನೆ ಬದುಕಿದ್ದಾರೆ. ಹೀಗೆ ನಡೆ-ನುಡಿ ಒಂದಾಗಿ ಹೊರಹೊಮ್ಮಿದ್ದರಿಂದ ವಚನಸಾಹಿತ್ಯಕ್ಕೆ ಒಂದು ವಿಶೇಷ ಬಿಗುವು-ಕನಸು ವಿಶ್ವಾಸಾರ್ಹತೆ ಪ್ರಾಪ್ತವಾಯಿತು.

ಸರಳತೆ ವಚನಗಳ ಮತ್ತೊಂದು ಮಹತ್ವದ ಗುಣ. ಸಾಹಿತ್ಯದ ಪರಿಕರಗಳಾದ ಪ್ರಾಸ, ಲಯ, ಧ್ವನಿ, ಅಲಂಕಾರಗಳು ಸಹಜವಾಗಿ ಇಲ್ಲಿ ಎಡೆಪಡೆದುಕೊಂಡಿವೆಯೆ ಹೊರತು, ಪಾಂಡಿತ್ಯ ಪ್ರದರ್ಶನಕ್ಕಾಗಿ ಎಳೆದು ತಂದಂತೆನಿಸುವುದಿಲ್ಲ. ಅರ್ಥಲಂಕಾರ, ಶಬ್ಧಾಲಂಕಾರ, ಉಪಮಾನ ಮೊದಲಾದ ಅಲಂಕಾರಗಳು ಸಹಜ ಉಕ್ತಿಯಾಗಿ ವಚನಗಳಲ್ಲಿ ಹಾಸುಹೊಕ್ಕಾಗಿ ಹರಡಿಕೊಂಡಿವೆ. ವಚನಗಳದ್ದೇ ಒಂದು ಲಯ, ಪ್ರಾಸ ಅನಾಯಾಸವಾಗಿ ಬಂದರೆ ಮಾತ್ರ;ನಿಯತವಲ್ಲ. ಕೇಳಲು ಹಿತಕರವಾಗಿರುತ್ತದೆ. ಜೊತೆಗೆ ಭಾವ ಪ್ರಚೋದಕವಾಗಿರುತ್ತದೆ. ಸ್ವಾಭಾವಿಕವಾಗಿಯೇ ಅಲ್ಲಲ್ಲಿ ಕೆಲವು ಆಧ್ಯಾತ್ಮಿಕ ಅನುಭವದ ವಚನಗಳು ಗ್ರಹಿಕೆಗೆ ಸಿಲುಕದಿರಬಹುದು. ಆದರೆ ಲೌಕಿಕ ಅನುಭವಗಳ ಅಭಿವ್ಯಕ್ತಿಯ ಸಂವಹನದಲ್ಲಿ ಅವು ಸಂಪೂರ್ಣ ಗೆಲ್ಲುತ್ತವೆ. ಎಷ್ಟೊ ಕಡೆ ಯಾವ ವ್ಯಾಖ್ಯಾನದ ಅವಶ್ಯಕತೆಯೂ ಕಂಡು ಬರುವುದಿಲ್ಲ. ವಚನಗಳನ್ನು ನೋಡುತ್ತಿದ್ದಂತೆ ಕಾಣುವ ಲಕ್ಷಣ ಅವು ತಪ್ಪದೆ ಪಡೆದುಕೊಂಡಿರುವ ಅಂಕಿತದ ಮುದ್ರೆ. ಶಿವಶರಣರು ಆತ್ಮದೊಂದಿಗೆ, ಪರಮಾತ್ಮನೊಂದಿಗೆ ಇಲ್ಲವೆ ಲೋಕದೊಂದಿಗೆ ನಡೆಸಿದ ಅನುಭಾವಿಕ ಸಂವಾದಗಳೇ ವಚನಗಳು. ತಮ್ಮಲ್ಲಿ ಅನುಭಾವದ ದೀಪ್ತಿಯನ್ನು, ಅಭಿವ್ಯಕ್ತಿಯ ಅಭೀಪ್ಸೆಯನ್ನು ಬೆಳಗಿಸಿದ ಇಷ್ಟದೈವ ಅಥವಾ ಗುರುವಿನ ಅಂಕಿತವನ್ನು ವಚನಕಾರರು ಪ್ರತಿವಚನದ ಅಂತ್ಯದಲ್ಲಿ ಮುದ್ರೆಯಂತೆ ಬಳಸಿದ್ದಾರೆ. ಉದಾಹರಣೆಗೆ ಕೂಡಲಸಂಗಮ ದೇವ, ಗುಹೇಶ್ವರ, ಚೆನ್ನಮಲ್ಲಿಕಾರ್ಜುನ, ಕಪಿಲಸಿದ್ಧ ಚೆನ್ನಮಲ್ಲಿಕಾರ್ಜುನ. ಕೆಲವರು ತಮ್ಮ ಹೆಸರನ್ನೆ ಅಂಕಿತವನ್ನಾಗಿ ಮಾಡಿಕೊಂಡಿರುವುದುಂಟು. ಉದಾಹರಣೆ-ಅಂಬಿಗರ ಚೌಡಯ್ಯ, ಉರಿಲಿಂಗದೇವ.

ಸಾಮಾನ್ಯವಾಗಿ ವಚನಗಳ ಶಿಲ್ಪಕಿರಿದು. ಆದರೆ ಅರ್ಥ ಮಾತ್ರ ಹಿರಿದಾಗಿರುತ್ತದೆ; ಪರಿಣಾಮಕಾರಿಯಾಗಿರುತ್ತದೆ. "...ಸಿದ್ಧಾಂತ ಪ್ರತಿಪಾದಕವಾದ ಅಥವಾ ದೀರ್ಘ ವರ್ಣನಾತ್ಮಕವಾದ ಕೆಲವು ವಚನಗಳನ್ನು ಬಿಟ್ಟರೆ ಉಳಿದ ಎಲ್ಲಾ ವಚನಗಳು ಸಾಮಾನ್ಯವಾಗಿ ಚಿಕ್ಕವು. ಆಯಾ ಕಾಲಕ್ಕೆ ಶರಣರಿಗೆ ಅನಿಸಿದ ಒಂದೊಂದು ಭಾವವನ್ನು ಮಾತ್ರ ಕುರಿತವು. ಈ ಅರ್ಥದಲ್ಲಿ ಆಧುನಿಕ ಭಾವಗೀತೆಗಳ ಲಕ್ಷಣಗಳನ್ನು ವಚನಗಳಲ್ಲಿ ಕಾಣುತ್ತೇವೆ. ಆದರೆ ವಚನಗಳು ಪದ್ಯಗಳಲ್ಲಿ ; ಗದ್ಯರೂಪವಾದವುಗಳು ಈ ಶೈಲಿ ಅಂದಿನ ಚಂಪು ಗ್ರಂಥಗಳಲ್ಲಿದ್ದ ಗದ್ಯಶೈಲಿಯಲ್ಲ; ಅಥವಾ ಆಡುಮಾತಿನ

ನೀರಸ ನಿರೂಪಣೆಯೂ ಅಲ್ಲ. ಪದ್ಯ ಶೈಲಿಯ ಭಾವಸೌಂದರ್ಯ, ಗದ್ಯದ ವಿಚಾರ ಪ್ರತಿಪಾದನೆ ಎರಡನ್ನೂ ಒಳಗೊಂಡ ಒಂದು ವಿಶಿಷ್ಟ ರೀತಿಯ 'ಗದ್ಯಗೀತೆಗಳೆಂದು ವಚನಗಳನ್ನು ಕರೆಯಬಹುದು..." ವಚನಸಾಹಿತ್ಯದ ರಚನಾ ವಿನ್ಯಾಸದ ಅನನ್ಯತೆಯನ್ನು ಈ ಅಭಿಪ್ರಾಯ ಸ್ಪಷ್ಟಪಡಿಸುತ್ತದೆ.

ಇಷ್ಟು ಮಾತ್ರವಲ್ಲ ವಚನ ರಚನೆಯಲ್ಲಿ ಶರಣರು ಮತ್ತೆ ಬೇರೆ ಪ್ರಯೋಗಗಳನ್ನೂ ಮಾಡಿದ್ದಾರೆ. ಬೆಡಗಿನ ವಚನಗಳು ಮತ್ತು ಸ್ವರವಚನಗಳು ಈ ಹಿನ್ನೆಲೆಯಲ್ಲಿ ಗಮನಾರ್ಹವಾಗಿವೆ. ಅರ್ಥ ಮತ್ತು ಅನುಭವಗಳನ್ನು ನಿಗೂಢಗೊಳಿಸಿ ಹೇಳುವ ಕ್ರಮವೇ ಬೆಡಗಿನ ವಚನ. ಅಲ್ಲಿ ಅವರು ಸೃಷ್ಟಿಸಿರುವ ಪ್ರತಿಮಾಲೋಕ ವಿಸ್ಮಯಕಾರಿಯಾಗಿದೆ. ಹಲವು ಶರಣರಿಗೆ ಸಾಕಷ್ಟು ಸಂಗೀತಜ್ಞಾವಿತ್ತು. ಅವರು ರಚಿಸಿರುವ ಸ್ವರವಚಗಳನ್ನು ಗಮನಿಸಿದರೆ ಸುವ್ಯಕ್ತವಾಗುತ್ತದೆ. ಸ್ವರವಚನಗಳು ಅವರ ವಿಶೇಷ ರಚನೆಗಳು. ಈ ಮಾದರಿಯ ಅಭಿವ್ಯಕ್ತಿಯಲ್ಲಿ ಅವರು ಉದ್ದೇಶಪೂರ್ವಕವಾಗಿ ನಿರ್ದಿಷ್ಟವಾದ ರಾಗ-ತಾಳಗಳನ್ನು ಅಳವಡಿಸಿದ್ದಾರೆ. ಅನುಭವದ ವಿಸ್ತಾರ ನಿರೂಪಣೆ ಮತ್ತು ಏಕತಾನತೆಯ ನಿವಾರಣೆಗಾಗಿ ಪ್ರಾಯಶಃ ಇಂಥ ಪ್ರಯೋಗ ಮಾಡಿರಬಹುದು.

ಇಂಥ ಈ ಅದ್ಭುತ ರಚನೆಗಳ ಮೂರ್ತ ಯಾವುದು? ಎಂಬುದರ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ಪ್ರಾಚೀನ ತಮಿಳಿನ ಭಕ್ತಿಗೀತೆಗಳಾದ 'ತೇವಾರಂ' ಪ್ರಭಾವದಿಂದ ಇವುಗಳು ರಚನೆಯಾಗಿರಬಹುದು ಎಂಬುದು ಒಂದು ಅಭಿಪ್ರಾಯ. ಸಂಸ್ಕೃತದ ಛಂದೋಗಂಧಿಯಾದ ಗದ್ಯವೇ ಇವುಗಳಿಗೆ ಮೂಲವಾಗಿರಬೇಕು ಎಂಬುದು ಮತ್ತೊಂದು ಅಭಿಪ್ರಾಯ. ಅಚ್ಚಗನ್ನಡದ ಛಂದೋರೂಪವಾದ ತ್ರಿಪದಿಯೇ ಪರಿವರ್ತನೆಗೊಂಡು ವಚನಗಳ ರೂಪವನ್ನು ಪಡೆದಿರಬಹುದೆಂಬುದು ಇನ್ನೊಂದು ಅಭಿಪ್ರಾಯ. ಅದು ಏನೆ ಇದ್ದರು ಶರಣರ ಸ್ವತಂತ್ರ ವಿಚಾರಧಾರೆ, ಸೃಜನಶೀಲ ಸ್ವೋಪಜ್ಞತೆ ಹಾಗೂ ಜನತಾ ಕಾಳಜೀಯ ಫಲವಾಗಿ ವಚನಗಳು ರಚನೆಯಾಗಿವೆ ಎಂಬುದನ್ನು ಮರೆಯಬಾರದು. "ಶರಣರ ಜೀವನ ಬಹುಮುಖವಾದದ್ದು. ಕೆಲವರಂತೂ ಒಂದು ಕಡೆ ಸಾಧಕರು; ಇನ್ನೊಂದು ಕಡೆ ಸಮಾಜಸೇವಕರು' ಮತ್ತೊಂದು ಕಡೆ ಧರ್ಮದ ಬೆಳಕನ್ನು ಹೊತ್ತ ದೀವಟಿಗರು ; ಕ್ರಾಂತಿಕಾರರು. ಆದರೂ ತಮ್ಮ ನಿತ್ಯಜೀವನದ ಕಾಯಕವನ್ನು ನಮ್ರ ಭಾವದಿಂದ ಮಾಡುವ ಕರ್ಮಾಕುಶಲಗಳು. ಜೀವನವನ್ನು ತೆರೆದ ಕಣ್ಣಿನಿಂದ ನೋಡಿದವರು. ಲೋಕದ ಕಷ್ಟಕಾರ್ಪಣ್ಯಗಳನ್ನು ಕಂಡು ಕನಿಕರಗೊಂಡರು. ಕಷ್ಟ ಸುಖಗಳನ್ನು ತಾವೂ ಉಂಡವರು. ಸ್ತುತಿ ನಿಂದಗಳನ್ನು ಏಕಪ್ರಕಾರವಾಗಿ ಬರಮಾಡಿಕೊಂಡವರು. ಈ ಎಲ್ಲ ಮುಖಗಳಿಂದ ನೂರಾರು ಅನುಭಗಳನ್ನು ಪಡೆದು ಚೇತನ ಶ್ರೀಮಂತವಾಗಿದ್ದಾರೆ..."

ಆತ್ಮಾನುಭಾವದ ಚೈತನ್ಯ ಮತ್ತು ಸಮಾಜಕಲ್ಯಾಣದ ತೀವ್ರಕಾಳಜಿಯೊಂದಿಗೆ,

–ಮೂಢನಂಬಿಕೆ, ಕಂದಾಚಾರಗಳಿಂದ ಜಡವಾಗಿದ್ದ ಸಮಾಜವನ್ನು ಪರಿವರ್ತಿಸುವ ಸಂಕಲ್ಪದಿಂದ ಅವರು ಒಂದು ವಿನೂತನ ಚಳುವಳಿಯನ್ನೇ ಪ್ರಾರಂಭಿಸಿದರು. ಮೇಲು–ಕೀಳು ಎಂಬ ವರ್ಣ ಅಸಮಾನತೆ;ಬಡವ ಬಲ್ಲಿದ ಎಂಬ ವರ್ಗ ತಾರತಮ್ಯ;ಹೆಣ್ಣು–ಗಂಡು ಎಂಬ ಲಿಂಗಭೇದ ಇವೆಲ್ಲ ತರತಮ ವ್ಯವಸ್ಥೆಯನ್ನು ಹೋಗಲಾಡಿಸಿ ಸಮಾನತೆಯ ಆಧಾರದ ಮೇಲೆ ಹೊಸ ಸಮಾಜವನ್ನು ಅವರು ಕಟ್ಟಬಯಸಿದರು. ಇದಕ್ಕಾಗಿ ಕಲ್ಯಾಣದಲ್ಲಿ ಅನುಭವ ಮಂಟಪ ಸ್ಥಾಪನೆಯಾಯಿತು. ಬಸವಣ್ಣ ಸಂಚಾಲಕನಾಗಿ ಮುಂದೆ ನಿಂತ. ಮಹಾನುಭಾವಿ ಅಲ್ಲಮಪ್ರಭುವಿನ ಮಾರ್ಗದರ್ಶನ ದೊರೆಯಿತು. ಚೆನ್ನಬಸವ, ಅಕ್ಕನಾಗಮ್ಮ, ಹಡಪದ ಅಪ್ಪಣ್ಣ, ಮಡಿವಾಳ ಮಾಚಯ್ಯ ಮೊದಲಾದ ನೂರಾರು ವಚನಕಾರರು ಕಾರ್ಯಕರ್ತರಾಗಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡರು. ಬಸವಾದಿ ಶರಣರು ಕಲ್ಯಾಣದಲ್ಲಿ ಹೊತ್ತಿಸಿದ ಈ ಬೆಳಕಿನ ಕಿರಣಗಳು ಕನ್ನಡ ನಾಡಿನಾದ್ಯಂತ ಮತ್ತು ಅದರಾಚೆಗೂ ವ್ಯಾಪಕವಾಗಿ ಹರಡಿದವು. ಉಡುತಡಿಯಿಂದ ಅಕ್ಕಮಹಾದೇವಿ, ಬಳ್ಳಿಗಾವೆಯಿಂದ ಪ್ರಭುದೇವ, ಸೊನ್ನಲಿಗೆಯಿಂದ ಸಿದ್ಧರಾಮ ಶಿವಯೋಗಿ, ನೆರೆಯ ಪ್ರಾಂತ್ಯದಿಂದ ತೆಲುಗು ಜೊಮ್ಮಯ್ಯ ದೂರದ ಕಾಶ್ಮೀರದಿಂದ ಮಹಾದೇವ–ಮಹಾದೇವಮ್ಮ–ಹೀಗೆ ನೂರಾರು ಚೈತನ್ಯಗಳು ಬಂದು ಕಲ್ಯಾಣದಲ್ಲಿ ಸಂಗಮಿಸಿದವು. ಈ ಇಡೀ ಸಮುದಾಯ ಸಾಮೂಹಿಕವಾಗಿ; ಅಸಮಾನತೆ, ದುಃಖ–ದಾರಿದ್ರ್ಯ, ಹಿಂಸೆ – ಕ್ರೌರ್ಯ ಮೌಢ್ಯತೆಗಳಿಂದ ತತ್ತರಿಸಿ ಹೋಗಿದ್ದ ಸಮಾಜವನ್ನು ಪರಿವರ್ತಿಸಿ, ಅಲ್ಲಿ ಸಮಾನತೆ, ಸುಖ, ಸಂತೋಷ, ಶಾಂತಿ, ಆತ್ಮ ಜ್ಞಾನದ ಬೀಜ ಬಿತ್ತಿ ಹೊಸ ವಾತಾವರಣ ನಿರ್ಮಿಸುವ ಶುಭಸಂಕಲ್ಪ ಮಾಡಿದರು. ಇದು ಕೇವಲ ಕರ್ನಾಟಕದ ವ್ಯಾಪ್ತಿಯಲ್ಲಿ ಮಾತ್ರವಲ್ಲ, ಇಡೀ ಭರತಖಂಡದ ವ್ಯಾಪ್ತಿಯಲ್ಲಿ ಒಂದು ಐತಿಹಾಸಿಕ ಮಹತ್ವದ ಸಂದರ್ಭವೆಂದೇ ಹೇಳಬಹುದು.

ಶಿವಶರಣರದು ಕೇವಲ ಭಾವನಾತ್ಮಕವಾದ ಚಿಂತನೆಯಾಗಿರಲಿಲ್ಲ. ಅದೊಂದು ಯೋಜನಾಬದ್ಧ ವೈಚಾರಿಕ ಸಂಘಟನೆಯಾಗಿತ್ತು. ತನ್ನಂತೆ ಇತರರೂ ಏಳಿಗೆಯಾಗಬೇಕೆಂಬ ನೈಜ ಹೃದಯ ವೈಶಾಲ್ಯತೆ ಹಾಗೂ ಅಜ್ಞಾನದ ಅಂಧಕಾರವನ್ನು ಜ್ಞಾನದ ಜ್ಯೋತಿಯಿಂದ ಹೊಡೆದೋಡಿಸುವ ಛಲ ಇವುಗಳ ತಳಹದಿಯ ಮೇಲೆ ಶರಣರ ಅಂದೋಲನ ರೂಪುಗೊಂಡಿತ್ತು. ಅನುಭವ ಮಂಟಪವು ಈ ಚಿಂತನೆಯ ವೇದಿಕೆಯೂ;ಪರಿವರ್ತನೆಯ ಪ್ರಯೋಗಶಾಲೆಯೂ ಆಗಿತ್ತು. ತಮ್ಮ ಧ್ಯೇಯಾನುಸಾರ ಸಮಾಜದ ಬಹುದೊಡ್ಡ ಶಕ್ತಿಯಾದ ಮಹಿಳೆಯರನ್ನು, ದಲಿತ ಸಮುದಾಯವನ್ನು, ಎಲ್ಲ ವೃತ್ತಿಯವರನ್ನು ಅನುಭವ ಮಂಟಪಕ್ಕೆ ಮುಕ್ತ ಮನಸ್ಸಿನಿಂದ ಬರಮಾಡಿಕೊಂಡರು. ಬಸವಾದಿ ಶರಣರ ಹೊಸ ಪರಿವರ್ತನೆಯು ಸಮಾಜಕಲ್ಯಾಣದಿಂದ ಬಿಜ್ಜಳನ ರಾಜಧಾನಿ ಕಲ್ಯಾಣಂ ನಗರಕ್ಕೆ ಒಂದು ಹೊಸ ಕಳೆ

ಪ್ರಾಪ್ತವಾಯಿತು. ವಚನಕಾರರ ಸಂಘಟನೆಯ ಮತ್ತೊಂದು ಹೆಗ್ಗಳಿಕೆಯೆಂದರೆ ಸಮಾಜದ ಬಹುದೊಡ್ಡ ಶಕ್ತಿಯಾದ ಮಹಿಳೆಯರನ್ನೂ ಸಮಾನಗೌರವದಿಂದ ಸಂಘಟನೆಗೆ ಬರಮಾಡಿಕೊಂಡದ್ದು. ಅಲ್ಲಿಯ ತನಕ ಸ್ವಲ್ಪ ಹೆಚ್ಚು ಕಡಿಮೆ ಮಹಿಳೆಯನ್ನೂ ಶೂದ್ರರಂತೆಯೇ ಧರ್ಮ-ಸಾಹಿತ್ಯ-ತಪಸ್ಸುಗಳಿಂದ ದೂರವಿರಿಸಲಾಗಿತ್ತು. ಮಹಿಳೆ ಏನೇ ಸಾಧನೆಗಳಿಗೆ ತಪಸ್ಸು ಮಾಡಿದರೂ ಮೋಕ್ಷಕ್ಕೆ ಅನರ್ಹಳೆಂದೂ ತಿಳಿಯಲಾಗಿತ್ತು. ಆದರೆ ವಚನಕಾರರು ಈ ಎಲ್ಲ ತಿಳಿವಳಿಕೆಯನ್ನು ಪಕ್ಕಕ್ಕೆ ತಳ್ಳಿ ಆಕೆಯೂ ಪುರುಷ ಸಮಾನ ಎಂದು ಭಾವಿಸಿದರು. ತಾವು ಆತ್ಮ ಸ್ವರೂಪಿಯಾಗಿರುವಂತೆ ಆಕೆಯೂ ಆತ್ಮಸ್ವರೂಪಿ ಎಂಬ ಸಿದ್ಧಾಂತವನ್ನು ಪ್ರತಿಪಾದಿಸಿದರು.

**ಮೊಲೆ ಮುಡಿ ಬಂದರೆ ಹೆಣ್ಣೆಂಬರು**
**ಗಡ್ಡ ಮೀಸೆ ಬಂದರೆ ಗಂಡೆಂಬರು**
**ನಡುವೆ ಸುಳಿವಾತ್ಮ ಹೆಣ್ಣು ಅಲ್ಲ ಗಂಡು ಅಲ್ಲ ಕಾಣಾ ರಾಮನಾಥ**

ಎಂಬ ದೇವರದಾಸಿಮಯ್ಯನವರ ಮಾತು ಮುಂದಿನವರಿಗೆಲ್ಲ ಮಾರ್ಗದರ್ಶಿಯಾಯಿತು. ಇದರಿಂದಾಗಿ ವಚನಕಾರರು ಜೋಡಿಯಾಗಿಯೇ ಸಾಧನೆ ಮಾಡಿದರು. ''ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎಂದು ದಾಸಿಮಯ್ಯನವರೆ ಈ ಜೋಡಿಸಾಧನೆಗೆ ಚಾಲನೆ ಕೊಟ್ಟರು. ಬಸವಣ್ಣ ಆತನ ಮಡದಿಯರು, ಮೋಳಿಗೆಯ ಮಾರಯ್ಯ-ಮಹಾದೇವಮ್ಮ, ಆಯ್ದಕ್ಕಿ ಮಾರಯ್ಯ-ಲಕ್ಷಮ್ಮ ಉರಿಲಿಂಗಪೆದ್ದಿ - ಕಾಳೆವ್ವ, ಹಡಪದ ಅಪ್ಪಣ್ಣ-ಲಿಂಗಮ್ಮ ಇವರ ಜೋಡಿಯನ್ನೂ ಇಲ್ಲಿ ಉದಾಹರಣೆಗಾಗಿ ಗಮನಿಸಬಹುದು. ಜೊತೆಗೆ ಅಕ್ಕನಾಗಮ್ಮ, ಮುಕ್ತಾಯಕ್ಕ, ಸತ್ಯಕ್ಕ, ಗುಡ್ಡವ್ವೆ, ದುಗ್ಗಳೆ, ಗೊಗ್ಗವ್ವೆ, ಕದಿರ ರೆಮ್ಮವ್ವೆ, ದೊಸೆಪೆಡ್ಡವ್ವೆ, ಸೂಳೆಸಂಕವ್ವೆ, ಕೇತಲದೇವಿ ಮೊದಲಾಗಿ 25-30 ಮಹಿಳೆಯರು ವಚನಕಾರರೊಂದಿಗೆ ಒಡಗೂಡಿ ಚಳುವಳಿ ಮುನ್ನಡೆಸುವಲ್ಲಿ ಮತ್ತು ಅದರ ಭಾಗವಾದ ವಚನರಚನೆಯಲ್ಲಿ ಸಕ್ರಿಯವಾಗಿ ಪಾಲುಗೊಂಡಿದ್ದರು. ಇಷ್ಟೊಂದು ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಹೀಗೆ ಕ್ರಿಯಾಶೀಲರಾದದ್ದು ಈ ಸಂದರ್ಭವನ್ನು ಹೊರತುಪಡಿಸಿದರೆ ಆಧುನಿಕ ಕಾಲ ಬಿಟ್ಟರೆ ಬೇರೆ ಯಾವ ಕಾಲದಲ್ಲಿಯೂ ಕಂಡುಬರುವುದಿಲ್ಲ! ಇದು ಮಹಿಳಾ ಸಾಂಸ್ಕೃತಿಕ ಇತಿಹಾಸದಲ್ಲಿ ದಾಖಲೆಯ ಸಂದರ್ಭವೆಂದೇ ಹೇಳಬಹುದು.

ವಚನಚಳುವಳಿಯಲ್ಲಿ ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದರೆಂಬುದಷ್ಟೆ ಮುಖ್ಯ ಸಂಗತಿಯಲ್ಲ. ಜೊತೆಗೆ ಅವರು ರಚಿಸಿದ ವಚನಗಳು - ಮಾಡಿದ ಸಾಧನೆ ವಚನಕಾರರ ಸಾಧನೆಗೆ ಸಮ ಸಮವಾಗಿದ್ದವು. ಎಂಬುದೂ ಗಮನಾರ್ಹವಾಗಿದೆ. ಶೂನ್ಯ ಸಂಪಾದನೆಯಲ್ಲಿ ಬರುವ ಮುಕ್ತಾಯಕ್ಕ

ಹಾಗೂ ಅಕ್ಕಮಹಾದೇವಿಯರ ಪ್ರಸಂಗಗಳನ್ನೂ ಇದಕ್ಕೆ ಉದಾಹರಣೆಯಾಗಿ ನೋಡಬಹುದು. ಅಲ್ಲಮಪ್ರಭುವಿನೊಂದಿಗೆ ಮುಕ್ತಾಯಕ್ಕ ನಡೆಸುವ ಆಧ್ಯಾತ್ಮಿಕ ಚರ್ಚೆ ಮಹಿಳೆಯು ಏರಬಹುದಾದ ಅನುಭಾವಿಕ ಎತ್ತರಕ್ಕೆ ಉತ್ತಮ ನಿದರ್ಶನವಾಗಿದೆ. ಜೀವಾತ್ಮ-ಪರಮಾತ್ಮ ಗುರು-ಶಿಷ್ಯ, ಸಾಧನೆಯ ಮಾರ್ಗ ದ್ವೈತ ನಿಲುವುಗಳನ್ನು ಕುರಿತು ಶ್ರೇಷ್ಠ ಅನುಭಾವಿಯಾದ ಅಲ್ಲಮಪ್ರಭುವಿನೊಂದಿಗೆ ಆಕೆ ನಡೆಸುವ ಸಂವಾದ ಅಪೂರ್ವವಾಗಿದೆ. ಸ್ವತಃ ಅಲ್ಲಮಪ್ರಭವೇ ಆಕೆಯ ತರ್ಕ, ಸಾಧನೆ, ಅನುಭವಗಳ ಎತ್ತರ ಕಂಡು ಮೆಚ್ಚಿ ಸಂತೋಷಪಡುತ್ತಾನೆ. ಆಕೆಗೆ ಮುಂದಿನ ಮಾರ್ಗವನ್ನು ದಿಗ್ದರ್ಶನ ಮಾಡುತ್ತಾನೆ.

ಹನ್ನೆರಡನೆಯ ಶತಮಾನದ ಶರಣಸಮುದಾಯ ಮಾತ್ರವಲ್ಲ ಇಂದಿನ ಆಧುನಿಕ ಮಾನವಸಮುದಾಯವೂ ಅಚ್ಚರಿಪಡುವ ರೀತಿಯಲ್ಲಿ ಬಾಳಿ-ಬೆಳಗಿದ ಮತ್ತೊಬ್ಬ ಮಹಾನ್ ಸಾಧಕಿ ಅಕ್ಕಮಹಾದೇವಿ. ಉಡುತಡಿಯಿಂದ ಆಕೆಯ ಜೀವನಶಖ ಆರಂಭವಾಗುತ್ತದೆ. ಊಹೆಗೆ ಮೀರಿದ ಕಷ್ಟಪರಂಪರೆಯನ್ನೇ ಎದುರಿಸಿ ಆಕೆ ಕಲ್ಯಾಣ ತಲುಪುತ್ತಾಳೆ. ಅಲ್ಲಿ ಶರಣರು ಒಡ್ಡಿದ ಭೌತಿಕ-ಬೌದ್ಧಿಕ-ಆಧ್ಯಾತ್ಮಿಕ ಅಗ್ನಿಪರೀಕ್ಷೆಯನ್ನು ಜಯಿಸಿ ಅಲ್ಲಿಂದ ತನ್ನ ಮಾನದೊಡೆಯ ಮಲ್ಲಿಕಾರ್ಜುನನಿರುವ ಶ್ರೀಶೈಲಕ್ಕೆ ತೆರಳುತ್ತಾಳೆ. ಹೀಗೆ ಲೌಕಿಕದ ಪಾತಳೆತೆಯಿಂದ ಶಿಖರಕ್ಕೆ ಏರುವ ಅಕ್ಕನ ಜೀವನ ಒಂದು ಪರಮಾದ್ಭುತ ವಿಸ್ಮಯ! ಲೋಕೋತ್ತರ ಮಾದರಿ. ಮನುಕುಲದ ಅಪೂರ್ವ ಸಿದ್ಧಿ!

**ಪರಾಮರ್ಶನ ಗ್ರಂಥಗಳು:**

1. ಬಸವರಾಜು ಎಲ್., (2016), ಅಕ್ಕನ ವಚನಗಳು, ಸ್ವಪ್ನ ಬುಕ್ ಹೌಸ್, ಬೆಂಗಳೂರು.
2. ತಿಪ್ಪೇರುದ್ರಸ್ವಾಮಿ ಎಚ್., (2019), ಶರಣರ ಅನುಭಾವ ಸಾಹಿತ್ಯ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.
3. ಗುರುಲಿಂಗ ಕಾಪಸೆ, (2022), ಅಕ್ಕಮಹಾದೇವಿ, ಸಾಹಿತ್ಯ ಆಕಾಡೆಮಿ, ದೆಹಲಿ.
4. ಶ್ರೀನಿವಾಸಮೂರ್ತಿ ಎಂ.ಆರ್., (1968), ವಚನಧರ್ಮಸಾರ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ತಿಪ್ಪೇರುದ್ರಸ್ವಾಮಿ ಎಚ್., (2016), ಕದಳಿ ಕರ್ಪುರ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.